ಕರ್ನಾಟಕ ಸರ್ಕಾರ

ಸಂಖ್ಯೆ: ಗ್ರಾಅಪ 286 ಗ್ರಾಪಂಅ 2021

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:27-07-2021

## ಸುತ್ತೋಲೆ

ವಿಷಯ: ಗ್ರಾಮ ಪಂಚಾಯಿತಿ ವಿಕಲಚೇತನರ ಅಭಿವೃದ್ಧಿ ಹಾಗೂ ಕಲ್ಯಾಣ ಕಾರ್ಯಕ್ರಮಗಳಿಗಾಗಿ ಆಯವ್ಯಯ ತಯಾರಿಕೆ ಕುರಿತು.

ಉಲ್ಲೇಖ 1. ಸನ್ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ದಿನಾಂಕ 06.02.2021 ರಂದು ಕರ್ನಾಟಕ ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿ ಸಭೆಯ ನಡವಳಿ.

2. ಸರ್ಕಾರ ಪ್ರಧಾನ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ದಿನಾಂಕ:05 ಮತ್ತು 06 ಏಪ್ರಿಲ್-2021 ರಂದು ನಡೆದ ಕಾರ್ಯಾಗಾರದ ನಡವಳಿ.
3. ದಿನಾಂಕ:07-04-2021 ರಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿ.
4. ದಿನಾಂಕ:14-06-2021 ರಂದು ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಅಧ್ಯಕ್ಷತೆಯಲ್ಲಿ ಶಿವಮೊಗ್ಗದಲ್ಲಿ ನಡೆದ ಸಭೆಯ ನಡವಳಿ.
5. ದಿನಾಂಕ: 02 ಮತ್ತು 03 ಜುಲೈ-2021 ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿ (ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರ ಅಧ್ಯಕ್ಷತೆಯಲ್ಲಿ ಎ.ಎನ್.ಎಸ್.ಎಸ್.ಐ.ಆರ್.ಡಿ., ಮೈಸೂರಿನಲ್ಲಿ ನಡೆದ ಕಾರ್ಯಾಗಾರದ ನಿರ್ಣಯಗಳು.
6. ದಿನಾಂಕ: 15-7-2021 ರಂದು ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಿರ್ಣಯಗಳು.

* * * * *

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ಪ್ರಕರಣ 58 ರನ್ವಯ ಗ್ರಾಮ ಪಂಚಾಯಿತಿಗಳು ವಿಕಲಚೇತನರ ಅಭಿವೃದ್ಧಿಗಾಗಿ ಹಾಗೂ ಅವರ ಕಲ್ಯಾಣ ಕಾರ್ಯಕ್ರಮಗಳಿಗಾಗಿ ಜಿಲ್ಲಾ, ತಾಲ್ಲೂಕು ಹಾಗೂ ಗ್ರಾಮ ಪಂಚಾಯಿತಿಗಳು ಅನುಷ್ಠಾನಗೊಳಿಸುವ ವಿವಿಧ ಅಭಿವೃದ್ಧಿ ಯೋಜನೆಗಳಲ್ಲಿ ಶೇ.3 ರಷ್ಟು ಅನುದಾನವನ್ನು ಕಾಯ್ದಿರಿಸಲು ಹಾಗೂ ಅದನ್ನು ವಿನಿಯೋಗಿಸಲು ಕ್ರಿಯಾ ಯೋಜನೆಯನ್ನು ಸಿದ್ದಪಡಿಸುವಂತೆ ದಿನಾಂಕ: 16-07-2019 ರಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಸುತ್ತೋಲೆಯನ್ನು ಹೊರಡಿಸಿರುತ್ತದೆ.

ಸನ್ಮಾನ್ಯ ಮುಖ್ಯಮಂತ್ರಿರವರು 2018-19ನೇ ಸಾಲಿನಲ್ಲಿ ವಿಕಲಚೇತನರ ಅಭಿವೃದ್ಧಿಗಾಗಿ ಹಾಗೂ ಅವರ ಕಲ್ಯಾಣ ಕಾರ್ಯಕ್ರಮಗಳಿಗಾಗಿ ವಿವಿಧ ಯೋಜನೆಗಳನ್ನು ಘೋಷಿಸಿರುವ ಹಿನ್ನೆಲೆಯಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಅನುಷ್ಠಾನಗೊಳಿಸುತ್ತಿರುವ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಅನುದಾನವನ್ನೊಳಗೊಂಡಂತೆ ವಿವಿಧ ಯೋಜನೆಗಳನ್ವಯ ಜಿಲ್ಲಾ, ತಾಲ್ಲೂಕು ಹಾಗೂ ಗ್ರಾಮ ಪಂಚಾಯಿತಿಗಳಿಗೆ

ಬಿಡುಗಡೆಯಾಗುವ ಅನುದಾನದಲ್ಲಿ ಶೇ.5 ರಷ್ಟನ್ನು ಕಡ್ಡಾಯವಾಗಿ ಕಾಯ್ದಿರಿಸಿ ಕಾರ್ಯಕ್ರಮಗಳನ್ನು ಗ್ರಾಮ ಪಂಚಾಯಿತಿಗಳು ರೂಪಿಸಬೇಕಾಗಿರುತ್ತದೆ.

ತತ್ಸಂಬಂಧ, ಗ್ರಾಮ ಪಂಚಾಯಿತಿಯು ತಯಾರಿಸುವ ದೂರದೃಷ್ಟಿ ಯೋಜನೆ ಹಾಗೂ ವಾರ್ಷಿಕ ಯೋಜನೆಗಳಲ್ಲಿ ವಿಕಲಚೇತನರ ಉದ್ದೇಶಿತ ಆಯವ್ಯಯದಡಿ ಶೇ.5 ರಷ್ಟು ಅನುದಾನವನ್ನು ವಿಕಲಚೇತನರ ಕಾರ್ಯಕ್ರಮಗಳಿಗೆ ವೆಚ್ಚ ಮಾಡಲು ಗ್ರಾಮ ಪಂಚಾಯಿತಿಯು ಕ್ರಮ ಕೈಗೊಳ್ಳಬೇಕಾಗಿರುತ್ತದೆ.

ಇದಲ್ಲದೇ, ಗ್ರಾಮ ಪಂಚಾಯಿತಿಗಳು ವಿಕಲಚೇತನರ ಸರ್ವೆ, ಗುರುತಿನ ಚೀಟಿ ವಿತರಣೆ, ಆಧಾರ್ ಲಿಂಕ್ ಮಾಡುವುದು. ವಿಕಲಚೇತನರಿಗಾಗಿ ಸಾಧನ ಸಲಕರಣೆ, ಶಿಶುಪಾಲನಾ ಭತ್ಯೆ, ನಿರುದ್ಯೋಗ ಭತ್ಯೆ ಪಿಂಚಣಿ, ವಿಶೇಷ ಶಾಲೆಗಳು, ವಿವಾಹ ಪ್ರೋತ್ಸಾಹ ಧನ, ಪುನರ್ವಸತಿ ಕೇಂದ್ರಗಳಿಗೆ ಶೇ.5 ರಷ್ಟು ಅನುದಾನವನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳುವುದು. ದೂರದೃಷ್ಟಿ ಹಾಗೂ ವಾರ್ಷಿಕ ಯೋಜನೆಗಳಲ್ಲಿ ಅಳವಡಿಸುವುದು ಹಾಗೂ ಗ್ರಾಮ ಸಭೆ ಮತ್ತು ಕೆ.ಡಿ.ಪಿ. ಸಭೆಗಳಲ್ಲಿ ಪ್ರಗತಿ ಪರಿಶೀಲನೆ ಮಾಡಲು ಅಗತ್ಯ ಕ್ರಮ ಕೈಗೊಳ್ಳುವುದು.

ಗ್ರಾಮ ಪಂಚಾಯಿತಿ ಮಟ್ಟದಿಂದ ವಿಕಲಚೇತನರ ಉದ್ದೇಶಿತ ಆಯವ್ಯಯವನ್ನು ಅನುಬಂಧ-1 ರಲ್ಲಿ ನೀಡಿರುವ ನಮೂನೆಗಳನ್ವಯ ತಯಾರಿಸಿ ತಾಲ್ಲೂಕು, ಜಿಲ್ಲಾ ಪಂಚಾಯಿತಿ ಹಾಗೂ ರಾಜ್ಯಮಟ್ಟಕ್ಕೆ ಸಲ್ಲಿಸಲು ಕ್ರಮ ಕೈಗೊಳ್ಳಬೇಕಾಗಿದೆ.

(ಉಮಾ ಮಹಾದೇವನ್)
ಸರ್ಕಾರದ ಪ್ರಧಾನ ಕಾರ್ಯದರ್ಶಿ (ಪಂ.ರಾಜ್)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಗೆ:

1. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
2. ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳು.
3. ರಾಜ್ಯದ ಎಲ್ಲಾ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು.

ಪ್ರತಿ:

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿ.
2. ಉಪಾಧ್ಯಕ್ಷರು, ಕರ್ನಾಟಕ ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬೆಂಗಳೂರು.
4. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರ ಆಪ್ತ ಕಾರ್ಯದರ್ಶಿ, ಬಹುಮಹಡಿ ಕಟ್ಟಡ, ಬೆಂಗಳೂರು
5. ಆಯುಕ್ತರು, ಪಂಚಾಯತ್ ರಾಜ್ ಆಯುಕ್ತಾಲಯ, ಜಿಲ್ಲಾ ಪಂಚಾಯತ್ ಕಟ್ಟಡ, ಕೆ.ಜಿ.ರಸ್ತೆ, ಬೆಂಗಳೂರು.
6. ನಿರ್ದೇಶಕರು, ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆ, ಮೈಸೂರು.
7. ಸಂಪಾದಕರು, ಕರ್ನಾಟಕ ವಿಕಾಸ ಪತ್ರಿಕೆ / ವೆಬ್‌ಸೈಟ್, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು.
8. ಕಛೇರಿ ಪ್ರತಿ.

ಅನುಬಂಧ – 1

# ವಿಶೇಷಚೇತನರ ಆಯವ್ಯಯ

| ಕ್ರಮ ಸಂಖ್ಯೆ | ಗ್ರಾಮ ಪಂಚಾಯಿತಿ ಹೆಸರು | ಗ್ರಾಮದ ಹೆಸರು | ವಿಷಯ | ಅಂದಾಜು ಮೊತ್ತ |
|---|---|---|---|---|
| 1 | | | ಶಿಕ್ಷಣ | |
| 2 | | | ಆರೋಗ್ಯ | |
| 3 | | | ಆಹಾರ ಮತ್ತು ಪೌಷ್ಟಿಕಾಂಶ | |
| 4 | | | ಜೀವನೋಪಾಯ | |
| 5 | | | ನೈರ್ಮಲ್ಯ ಮತ್ತು ಸುಚಿತ್ವ | |
| 6 | | | ವಸತಿ | |
| 7 | | | ಮಾನವ ಸಂಪನ್ಮೂಲ ಅಭಿವೃದ್ಧಿ | |
| 8 | | | ಮೂಲಭೂತ ಸೌಕರ್ಯ / ಸುರಕ್ಷತೆ | |

| ಕ್ರಮ ಸಂಖ್ಯೆ | ವಲಯ | ಚಟುವಟಿಕೆಗಳು | ಅಂದಾಜು ಮೊತ್ತ |
|---|---|---|---|
| 1 | ಶಿಕ್ಷಣ | ಪ್ರತಿ ವರ್ಷ ವಿಶೇಷಚೇತನ ಮಕ್ಕಳ ನಾಯಕತ್ವ ಬೆಳವಣಿಗೆ ಶಿಬಿರವನ್ನು ಹಮ್ಮಿಕೊಂಡು ಅವರಲ್ಲಿ ಕೌಶಲ್ಯಾಭಿವೃದ್ಧಿ, ಶೈಕ್ಷಣಿಕ ಅವಕಾಶಗಳ ಕರಿತು ತರಬೇತಿ ನೀಡುವುದು. | |
| | | ಆಟೋಟಗಳ, ಸಾಂಸ್ಕೃತಿಕ ಚಟುವಟಿಕೆಗಳ ಸ್ಪರ್ಧೆಯನ್ನು ಏರ್ಪಡಿಸುವುದು. | |
| | | Signageಗಳನ್ನು ಬಳಸುವ ಕುರಿತು ಹಾಗೂ ಬ್ರೈಲ್‌ಲಿಪಿ ಬಳಕೆಯ ಬಗ್ಗೆ ತರಬೇತಿ ನೀಡುವುದು. | |
| | | ನಿರ್ದಿಷ್ಟ ಕಲಿಕಾವೈಕಲ್ಯತೆ ಮಕ್ಕಳ ಕಲಿಕೆಯನ್ನು ಹೆಚ್ಚಿಸುವಲ್ಲಿ ಹಾಗೂ ವಿಶೇಷಚೇತನ ಮಕ್ಕಳು ಕಲಿಕೆಯಿಂದ ಹೊರಗುಳಿಯದಂತೆ ನೋಡಿಕೊಳ್ಳುಲು ಆಶಾ/ ಅಂಗನವಾಡಿ / ಶಾಲಾ ಶಿಕ್ಷಕರಿಗೆ ತರಬೇತಿಯನ್ನು ಆಯೋಜಿಸುವುದು. | |
| | | ಕಂಪ್ಯೂಟರ್ ಕೋರ್ಸ್ ಗಳ ತರಬೇತಿ ಆಯೋಜಿಸುವುದು. | |
| | | ಸ್ಪೋಕನ್ ಇಂಗ್ಲೀಷ್ ಕೋರ್ಸ್ ತರಬೇತಿ ಆಯೋಜಿಸುವುದು. | |
| | | ಸ್ಪರ್ಧಾತ್ಮಕ ಪರೀಕ್ಷೆಗೆ ತರಬೇತಿ ಆಯೋಜಿಸುವುದು | |
| | | ಮಕ್ಕಳೊಂದಿಗೆ ಹೇಗೆ ಉತ್ತಮವಾಗಿ ಕೆಲಸ ಮಾಡಲು ಸಾಧ್ಯ ಎಂಬುದರ ಕುರಿತು ಪೋಷಕರಿಗೆ ಮತ್ತು ಮಕ್ಕಳೊಂದಿಗೆ ಕೆಲಸ ಸಿಬ್ಬಂದಿಗೆ ಈ ಕುರಿತು ಕೌಶಲ್ಯಾಭಿವೃದ್ಧಿ ತರಬೇತಿ ನೀಡುವುದು | |
| 2 | ಆರೋಗ್ಯ | ವಿಶೇಷಚೇತನರ ಆರೋಗ್ಯ ತಪಾಸಣೆ ಶಿಭಿರಗನ್ನು ಆಯೋಜಿಸುವುದು ತಪಾಸಣೆ ಮಾಡಿಸುವುದು. | |
| | | 21 ಅಂಗ ವೈಕಲ್ಯಗಳನ್ನು ವಿಧಗಳನ್ನು ಪತ್ತೆ ಹಚ್ಚಲು ವಿಶೇಷ ಚೇತನರ ವಿಶೇಷಚೇತನ ವ್ಯಕ್ತಿಗಳ ತಪಾಸಣೆಗಾಗಿ ಅಗತ್ಯವಿರುವ ಉಪಕರಣಗಳ ಮತ್ತು ಯಂತ್ರಗಳ ವ್ಯವಸ್ಥೆಯನ್ನು ಆರೋಗ್ಯ ಇಲಾಖೆಯ ಸಹಾಯದಿಂದ ಮಾಡಿಸುವುದು. | |
| | | ವಿಶೇಷಚೇತನರಿಗೆ ಬಳಕೆಗೆ ಅಗತ್ಯಯವಿರುವ ಉಪಕರಣಗಳನ್ನು ಕೊಡಿಸುವುದು. | |

| ಕ್ರಮ ಸಂಖ್ಯೆ | ವಲಯ | ಚಟುವಟಿಕೆಗಳು | ಅಂದಾಜು ಮೊತ್ತ |
|---|---|---|---|
| | | ಮಾನಸಿಕ ಮತ್ತು ಆರೋಗ್ಯಕ್ಕೆ ಸಂಬದಿಸಿದಂತೆ ಆಪ್ತ ಸಮಾಲೋಚನ ಕೋಡಿಸುವುದು. | |
| | | ವಿಶೇಷಚೇತನರ ಉಪಕರಣಗಳ ಬಳಕೆಯ ಬಗ್ಗೆ ಅರಿವು ತರಬೇತಿ ನೀಡುವುದು. | |
| 3 | ಆಹಾರ ಮತ್ತು ಪೌಷ್ಠಿಕಾಂಶ | ಆಹಾರ ಮತ್ತು ಪೌಷ್ಟಿಕಾಂಶಗಳ ಬಗ್ಗೆ ಅರಿವು ಮೂಡಿಸುವುದು. | |
| | | ವಿಶೇಷಚೇತನರ ಪುರ್ನವಸತಿಗಳಲ್ಲಿ , ಅಂಗನವಾಡಿಗಳಲ್ಲಿ, ಶಾಲೆಗಳಲ್ಲಿ ಉತ್ತಮ ಆಹಾರ ಮತ್ತು ಪೌಷ್ಠಿಕಾಂಶಗಳು ನೀಡುವುದು. | |
| 4 | ಜೀವನೋಪಾಯ | ವಿಶೇಷಚೇತನರ ಯು.ಡಿ. ಐ.ಡಿ ಕಾರ್ಡ್ ಒದಗಿಸುವುದು. | |
| | | ಕೌಶಲ್ಯ ಅಭಿವೃದ್ದಿ ಯೋಜನೆಗಳಲ್ಲಿ ವೀಶೇಷಚೇತನರ ಸರ್ವತೋಮುಖ ಅಭಿವೃದ್ಧಿಗೊಳಿಸುವುದು. | |
| | | ವಿಶೇಷಚೇತನರಿಗೆ ವಿಶೇಷವಾಗಿ ಕೌಶಲ್ಯಾಭಿವೃದ್ಧಿ ತರಬೇತಿಗನ್ನು ನೀಡಿ ಅವರ ಜೀವನೋಪಾಯಕ್ಕೆ ಅನಕೂಲ ಮಾಡುವುದು. | |
| | | ವಿಶೇಷಚೇತನ ವ್ಯಕ್ತಿಗಳ ಆರೈಕೆದಾರರಿಗೆ ವೈದ್ಯಕೀಯ ಮತ್ತು ಸಾಮಾಜಿಕ ಪುನರ್ವಸತಿ ಬಗ್ಗೆ ಕೌಶಲ್ಯ ತರಬೇತಿ ಏರ್ಪಡಿಸುವುದು. | |
| | | ಗ್ರಾಮ ಪಂಚಾಯತಿ ಮಟ್ಟದಲ್ಲಿ ವಿಶೇಷಚೇತನರ ಅಥವಾ ಅವರ ಆರೈಕೆದಾರರು ಸ್ತ್ರೀಶಕ್ತಿ ಗುಂಪಿನಲ್ಲಿ / ಸ್ವ ಸಹಾಯ (SHG) ಗುಂಪುಗಳಲ್ಲಿ ಅಥವ ಇನ್ಯಾವುದೇ ಸ್ವಸಹಾಯ ಸಂಘಗಳಲ್ಲಿ ಸದಸ್ಯರಾಗಲು ಬೆಂಬಲನೀಡುವುದು. | |
| | | ಸರಳ ಸಹಾಯಕ ಸಾಧನಗಳ ಮತ್ತು ಶ್ರವಣ ಸಾಧನಗಳ ರಿಪೇರಿ ಮತ್ತು ನಿರ್ವಹಣೆ ಕರಿತು ಗ್ರಾಮೀಣ ಪುನರ್ವಸತಿ ಕಾರ್ಯಕರ್ತರಿಗೆ, ಜಿಪಿಎಲ್ಎಫ್ ಪ್ರತಿನಿಧಿಗಳಿಗೆ ತರಬೇತಿ ಆಯೋಜಿಸುವುದು. | |
| | | ಸರಳ ಸಹಾಯಕ ಸಾಧನಗಳ ಮತ್ತು ಶ್ರವಣ ಸಾಧನಗಳ ದುರಸ್ತಿಗಾಗಿ ಸ್ಥಳೀಯವಾಗಿ ಲಭ್ಯವಿರಿವ ನುರಿತರು, ಇವರಯಗಳಲ್ಲಿ ಚಮ್ಮಾರ, ಬಡಗಿ ಮುಂತಾದವರನ್ನು ಗುರುತಿಸಿ ತರಬೇತಿ ನೀಡುವುದು | |
| 5 | ನೈರ್ಮಲ್ಯ ಮತ್ತು ಶುಚಿತ್ವ | ನೈರ್ಮಲ್ಯ ಮತ್ತು ಸುಶುಚಿತ್ವ ಬಗ್ಗೆ ಅರಿವು ಮೂಡಿಸುವುದು. | |
| | | ವಿಶೇಷಚೇತನರ ಪುರ್ನವಸತಿಗಳಲ್ಲಿ , ಅಂಗನವಾಡಿಗಳಲ್ಲಿ, ಶಾಲೆಗಳಲ್ಲಿ ಉತ್ತಮ ನೈರ್ಮಲ್ಯ ಮತ್ತು ಶುಚಿತ್ವ ಬಗ್ಗೆ ಅರಿವು ನೀಡುವುದು. | |
| 6 | ವಸತಿ | ವಿಶೇಷಚೇತನ ನಿರ್ಗತಿಕರಿಗೆ ಪುನರ್ವಸತಿಗಳನ್ನು ಕಲ್ಪಿಸಿಕೊಡುವುದು. | |
| 7 | ಮಾನವ ಸಂಪನ್ಮೂಲ ಅಭಿವೃದ್ಧಿ | ವಿಶೇಷಚೇತನರ ಜೊತೆ ಕಾರ್ಯನಿರ್ವಹಿಸುವ ಆಶಾ, ಅಂಗನವಾಡಿ ಕಾರ್ಯಕರ್ತೆಯರು, ಎಎನೆಮ್, ಶಾಲಾ ಶಿಕ್ಷಕರು, ಗ್ರಮೀಣ ಪುನರ್ವಸತಿ ಕಾರ್ಯಕರ್ತರ ಸಾಮರ್ಥ್ಯ ಅಭಿವೃದ್ಧಿಪಡಿಸಲು ಉತ್ತಮ ಸಮಾಲೋಚನೆ ನೀಡಿಸುವುದು. | |
| | | ವಿಶೇಷಚೇತನರ ಜೊತೆ ಕಾರ್ಯನಿರ್ವಹಿಸುವ ಆಶಾ, ಅಂಗನವಾಡಿ ಕಾರ್ಯಕರ್ತೆಯರು, ಎಎನೆಮ್, ಶಾಲಾ ಶಿಕ್ಷಕರು, ಗ್ರಮೀಣ ಪುನರ್ವಸತಿ ಕಾರ್ಯಕರ್ತರ ಸಾಮರ್ಥ್ಯ ಅಭಿವೃದ್ಧಿಪಡಿಸಲು ಉತ್ತಮ ತರಬೇತಿಗಳನ್ನು ನೀಡುವುದು. | |
| 8 | ಮೂಲಭೂತ ಸೌಕರ್ಯ / ಸುರಕ್ಷತೆ | ಗ್ರಾಮವನ್ನು ವಿಶೇಷಚೇತನರ ಸ್ನೇಹಿ ಮಾದರಿ ಗ್ರಾಮವನ್ನಾಗಿ ಅಬಿವೃದ್ದಿ ಪಡಿಸುವುದು. | |
| | | ಗ್ರಾಮದಲ್ಲಿ ವಿಶೇಷಚೇತರ ಹಕ್ಕುಗಳನ್ನು ಕುರಿತು ಅರಿವು ಮೂಡಿಸುವುದು. | |
| | | ಡಿಸೆಂಬರ್ 3 ರಂದು "ವಿಶ್ವ ವಿಕಲಚೇತನರ" ದಿನವನ್ನು ಆಚರಿಸುವುದು. | |
| | | ವಿಶೇಷಚೇತನರ ಕಾಯ್ದೆ ಬಗ್ಗೆ ಸಮುದಾಯದಲ್ಲಿ ಅಧಿಕಾರಿ ಹಾಗೂ ಅಧಿಕಾರೇತರರಲ್ಲಿ ಅರಿವು ಮೂಡಿಸುವುದು. | |

| ಕ್ರಮ ಸಂಖ್ಯೆ | ವಲಯ | ಚಟುವಟಿಕೆಗಳು | ಅಂದಾಜು ಮೊತ್ತ |
| --- | --- | --- | --- |
| | | ವಿಶೇಷಚೇತನರ "ಸಂಪನ್ಮೂಲ ನೆಲೆ" ಸ್ಥಾಪನೆ ಮಾಡಿ ಅಲ್ಲೆ ಅವಶ್ಯಕ ಸಾಧನ- ಸಲಕರಣೆಗಳ ತಯಾರಿ, ಪೂರೈಕೆ ಮತ್ತು ದುರಸ್ತಿಮಾಡುವ ವ್ಯವಸ್ಥೆಯನ್ನು ಕಲ್ಪಿಸುವುದು. | |
| | | ಸಾರ್ವಜನಿಕ ಸ್ಥಳ ಅಥವಾ ಕಛೇರಿಗಳಲ್ಲಿ ವ್ಯವಹರಿಸಲು ವಿಶೇಷಚೇತನರ ತಡೆ ರಹಿತ ವಾತವರಣ ಮತ್ತು ಮೂಲಭೂತ ಸೌಲಭ್ಯ ಒದಗಿಸುವುದು | |
| | | ಗ್ರಾಮ ಪಂಚಾಯತಿ ಕಾರ್ಯಲಯವನ್ನು ವಿಶೇಷಚೇತನರ ಸ್ನೇಹಿ ಕಟ್ಟಡಗಳಾಗಿಸುವುದು. | |
| | | ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ವಿಶೇಷ ಚೇತನರ ಸ್ನೇಹಿ ಕಟ್ಟಡಗಳಾಗಿಸುವುದು. | |
| | | ಶಾಲೆಗಳನ್ನು ವಿಶೇಷಚೇತನರ ಸ್ನೇಹಿ ಕಟ್ಟಡಗಳಾಗಿಸುವುದು. | |
| | | ಅಂಗನವಾಡಿಗಳನ್ನು ವಿಶೇಷಚೇತನರ ಸ್ನೇಹಿ ಕಟ್ಟಡಗಳಾಗಿಸುವುದು. | |
| | | ಪೋಲಿಸ್ ಠಾಣೆಗಳನ್ನು ವಿಶೇಷಚೇತನರ ಸ್ನೇಹಿ ಕಟ್ಟಡಗಳಾಗಿಸುವುದು. | |
| | | ವಸತಿ ಶಲೆಗಳು / ವಸತಿ ನಿಲಯಗಳು ವಿಶೇಷ ಚೇತನರ ಸ್ನೇಸಿ ಶೌಚಾಲಯಗಳ ವ್ಯವಸ್ಥೆ ಮಾಡುವುದು. | |
| | | ಪದವಿ ಪೂರ್ವಕಾಲೇಜು ವಿಶೇಷ ಚೇತನರ ಸ್ನೇಹಿ ಶೌಚಾಲಯಗಳ ವ್ಯವಸ್ಥೆ ಮಾಡುವುದು. | |
| | | ಶಾಲೆಗಳಲ್ಲಿ ವಿಶೇಷಚೇತನರ ಸ್ನೇಸಿ ಶೌಚಾಲಯಗಳ ವ್ಯವಸ್ಥೆ ಮಾಡುವುದು. | |
| | | ಗ್ರಾಮ ಪಂಚಾಯತಿ ಕಾರ್ಯಲಯದಲ್ಲಿ ವಿಶೇಷಚೇತನರ ಸ್ನೇಸಿ ಶೌಚಾಲಯಗಳ ವ್ಯವಸ್ಥೆ ಮಾಡುವುದು. | |